ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2154
ಸದಸ್ಯರ ಹೆಸರು	ಶ್ರೀ ಯು.ಬಿ. ವೆಂಕಟೇಶ್, (ನಾಮನಿರ್ದೇಶನ ಹೊಂದಿದವರು)
ಉತ್ತರಿಸುವ ದಿನಾಂಕ	25-03-2021
ಉತ್ತರಿಸುವ ಸಚಿವರು	ಮಾನ್ಯ ಮುಖ್ಯಮಂತ್ರಿಗಳು

ಪ್ರಶ್ನೆ	ಉತ್ತರ
ಅ) ಕರ್ನಾಟಕ ಲೋಕಸೇವಾ ಆಯೋಗವು 2015ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆಸಲಾದ ಪರೀಕ್ಷೆಯಲ್ಲಿ ಎಷ್ಟು ಸಹಾಯಕ ಕಮೀಷನ್ (ಗ್ರೂಪ್-ಎ) ಮೂಲ ವೃಂದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿನ ಹುದ್ದೆಗಳಿಗೆ ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ:	ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ವಾಣಿಜ್ಯ ತೆರಿಗೆಗಳ ಇಲಾಖೆಗೆ 2015ನೇ ಸಾಲಿನಲ್ಲಿ ಸಹಾಯಕ ಕಮೀಷನ್ (ಗ್ರೂಪ್-ಎ) ಹುದ್ದೆಗೆ ಒಟ್ಟು 55 ಉಳಿಕೆ ಮೂಲ ವೃಂದದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ.
ಆ) ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡುವ ಮುನ್ನ ದಾಖಲಾತಿಗಳ ಪರಿಶೀಲನೆಗಾಗಿ ದಾಖಲಾತಿಗಳನ್ನು ಒದಗಿಸಲು ತಿಳಿಸಿದ ನಂತರವೂ, ದಾಖಲಾತಿಗಳನ್ನು ಒದಗಿಸದೇ ಗೈರು ಹಾಜರಾದ ಅಥವಾ ಹುದ್ದೆಗೆ ಹಾಜರಾಗುವುದಿಲ್ಲವೆಂದು ಲಿಖಿತ ಮೂಲಕ ತಿಳಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು;	ಉಳಿಕೆ ಮೂಲ ವೃಂದದ ಹುದ್ದೆಗಳ ಪೈಕಿ ಒಟ್ಟು 3 ಅಭ್ಯರ್ಥಿಗಳು ದಾಖಲಾತಿಗಳ ಪರಿಶೀಲನೆಗಾಗಿ ದಾಖಲಾತಿಗಳನ್ನು ಒದಗಿಸಲು ತಿಳಿಸಿದ ನಂತರವೂ, ದಾಖಲಾತಿಗಳನ್ನು ಒದಗಿಸದೇ ಗೈರು ಹಾಜರಾಗಿರುತ್ತಾರೆ ಹಾಗೂ ಹುದ್ದೆಗೆ ಹಾಜರಾಗುವುದಿಲ್ಲವೆಂದು ಲಿಖಿತವಾಗಿ ಯಾವ ಅಭ್ಯರ್ಥಿಯು ತಿಳಿಸಿರುವುದಿಲ್ಲ.
ಇ) ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರ ಆಯ್ಕೆಯಾಗಿರುವ ಮೀಸಲಾತಿಯ ಪ್ರವರ್ಗಗಳ ವಿವರಗಳನ್ನು ನೀಡುವುದು;	ಕ್ರ.ಸಂ. / ಅಭ್ಯರ್ಥಿಯ ಹೆಸರು / ಮೀಸಲಾತಿ ಪ್ರವರ್ಗ: 1 / ಶ್ರೀ ಪ್ರವೀಣ್ ಲಕ್ಕಪ್ಪ ಪಾಟೀಲ್ / GM/3B/RL 2 / ಶ್ರೀ ಮಿರ್ಜಾ ಖಾದೀರ್ ಬೇಗ್ / 2B 3 / ಶ್ರೀ ಯೋಗೇಶ ಎಂ.ಆರ್., / GM/2A/PH-LV
ಈ) ಆಯ್ಕೆ ಮಾಡಿದ ಈ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡಿದ ನಂತರವೂ ಈವರೆವಿಗೂ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ಅಂತಹ ಅಭ್ಯರ್ಥಿಗಳ ಹೆಸರು ಮತ್ತು ಅವರ ಆಯ್ಕೆಯಾಗಿರುವ ಮೀಸಲಾತಿ ಪ್ರವರ್ಗಗಳ ವಿವರಗಳನ್ನು ನೀಡುವುದು)	ಆಯ್ಕೆ ಮಾಡಿದ ಉಳಿಕೆ ಮೂಲ ವೃಂದದ ಹುದ್ದೆಗಳ ಪೈಕಿ ನೇಮಕಾತಿ ಆದೇಶ ನೀಡಿದ ನಂತರವೂ ಈವರೆವಿಗೂ ಇಬ್ಬರು ಅಭ್ಯರ್ಥಿಗಳು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಕ್ರ.ಸಂ. / ಅಭ್ಯರ್ಥಿಯ ಹೆಸರು / ಮೀಸಲಾತಿ ಪ್ರವರ್ಗ: 1 / ರಾಘವೇಂದ್ರ ಎನ್. / ST 2 / ಮೇಜರ ಡಾ॥ ಅಶೋಕ ಎಸ್.ಯು. / GM/XMP

ಆಇ 64 ವಾತೆಸಿ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ